ಮಾರನೆಯ ದಿನ ಮೋಗ್ಲಿ ಎಂಬ ಗಂಡು ಹುಲಿಯೊಂದು ಗೆಸ್ಟ್ ಹೌಸ್ ಸಮೀಪ ಬೇಟೆಯಾಡಿರುವ ವಿಷಯ ರಾತ್ರಿ ಬೀಟ್ ನಲ್ಲಿದ್ದ ಅರಣ್ಯಾಧಿಕಾರಿಯೊಬ್ಬರು ತಿಳಿಸಿದ್ದರು. ಬೇಗ ಎದ್ದು ಅಲ್ಲಿಗೇ ಮೊದಲು ಹೋಗಬೇಕೆಂದು ತರಾತುರಿಯಲ್ಲಿ ಹೊರಟೆವು. ಈ ಮಾಹಿತಿ ನಮಗೆ ಮಾತ್ರ ತಿಳಿದಿದ್ದು, ಯಾರಿಗೂ ಇದರ ಕಿಂಚಿತ್ತೂ ಸುಳಿವು ಕೊಡಬಾರೆಂದು ಮಾತಾಡಿಕೊಂಡೆವು. ಅಲ್ಲಿಗೆ ಹೋಗುವಷ್ಟರಲ್ಲಿ ಹತ್ತಾರು ಜೀಪುಗಳು ನಮಗಿಂತ ಮೊದಲೇ ಅಲ್ಲಿ ಲಂಗರು ಹಾಕಿ ನಿಂತಿದ್ದವು. ಹುಲಿ ಯಾವ ಕಡೆಯಿಂದ ಬರಬಹುದೆಂಬ ಅಂದಾಜು ಯಾರಿಗೂ ಇರಲಿಲ್ಲ.

ನಮ್ಮ ಡ್ರೈವರ್, ಅದು ರಾತ್ರಿ ಬೇಟೆಯನ್ನು ಗಡದ್ದಾಗಿ ತಿಂದಿದೆ ಎಂದಾದರೆ ಈ ಕೆಳಗಿನ ಹಳ್ಳದಲ್ಲೇ ಅದು ವಿಶ್ರಾಂತಿಗೆ ಮಲಗಿರುತ್ತದೆ. ನಾವು ಇಲ್ಲೇ ನಿಂತು ಕಾಯೋಣ. ನೀವೆಲ್ಲಾ ಹಳ್ಳದ ಕಡೆಗೆ ನಿಮ್ಮ ಕ್ಯಾಮೆರಾ ಕಣ್ಣು ಕೀಲಿಸಿಕೊಂಡಿರಿ ಎಂದು ಸಲಹೆ ಕೊಟ್ಟನು. ಅವನು ಹೇಳಿದಂತೆಯೇ ಮೋಗ್ಲಿ ಎಂಬ ಧಡೂತಿ ಹಸಿರು ಎಲೆಗಳ ಸರಿಸಿ ಮೇಲೆ ಬಂದನು. ಪಟಪಟ ಎಂದು ಚಿತ್ರ ತೆಗೆದೆವು. ಹುಲಿ ನಮ್ಮ ಕಡೆ ತಿರುಗಿ ಒಮ್ಮೆ ನೋಡಲೆಂದು ಕಾತರಿಸಿದರೂ ಅದಕ್ಕೆ ಆಸ್ಪದವಾಗಲಿಲ್ಲ. ಮೈ ಜುಂ ಎನಿಸುವಷ್ಟು ದೃಢಕಾಯದ ಮೋಗ್ಲಿ ನಿದ್ದೆ ಮಾಡುವ ಮೂಡಿನಲ್ಲಿತ್ತು. ನಮ್ಮೆಲ್ಲರ ಸಾಮೀಪ್ಯವನ್ನು ಕೊಂಚವೂ ಗಮನಿಸದೆ ಗಂಭಿರವಾಗಿ ನಡೆದು ಮುಂದಿನ ಬೆಟ್ಟ ಹತ್ತಿತು. ಅದು ಇನ್ನೆರಡು ದಿನ ಈಚೆಗೆ ಬರುವುದಿಲ್ಲ. ಸಖತ್ತಾಗಿ ಉಂಡಿದೆ. ಯಮನಿದ್ರೆ ಬಾರಿಸುತ್ತದೆ. ರಾತ್ರಿ ಹೊತ್ತು ನೀರು ಕುಡಿಯಲು ಬಂದರೂ ಬರಬಹುದು. ಕೊಂದಿರುವುದು ಸಣ್ಣ ಜಿಂಕೆಯಾಗಿರುವುದರಿಂದ ಕಂಠಪೂರ್ತಿ ಉಂಡಿದೆ ಎಂದು ನ್ಯಾಚುರಲಿಸ್ಟ್ ಭವಿಷ್ಯವಾಣಿ ನುಡಿದನು.

ನಾವು ಕಾತರದಿಂದ ಕಾಯುತ್ತಿದ್ದ ಬಿಜಲಿ ಎಂಬ ಹೆಣ್ಣು ಹುಲಿ ತನ್ನ ಮಕ್ಕಳ ಜೊತೆ ಬಂದು ಕೆರೆಯ ಬದಿಯಲ್ಲಿ ಕೂತಿದ್ದಳು. ತನ್ನ ಮುದ್ದು ಮಕ್ಕಳ ಜೊತೆ ಆಕೆ ನಡೆದು ಬರುವ ಪಟ ತೆಗೆಯಬೇಕೆಂಬ ದೊಡ್ಡ ಇರಾದೆಯಿಂದ ನಾವು ಜಪಾನಿ ಪಾಯಿಂಟ್ ಎಂಬ ಸ್ಥಳದಲ್ಲಿ ಶತಪಥ ಅಲೆದಾಡಿದೆವು. ಜಪಾನ್ ದೇಶದ ಆಯೋಮಿ ಎಂಬ ಹೆಣ್ಣು ಮಗಳೊಬ್ಬಳು ಅಪಘಾತಕ್ಕೆ ಒಳಗಾಗಿ ಇಪ್ಪತ್ತಾರು ವರ್ಷದ ಹಿಂದೆ ಇದೇ ಸ್ಥಳದಲ್ಲಿ ಸಾವನ್ನಪ್ಪಿದ್ದಳು. ಈ ಕಾರಣಕ್ಕೆ ಆ ಜಾಗೆಗೆ ಜಪಾನಿ ಪಾಯಿಂಟ್ ಎಂಬ ಹೆಸರು ಬಂದಿದೆ. ತಿರುವು ಮುರುವಾದ ಈ ಸ್ಥಳ ಈಗಲೂ ಆಕ್ಸಿಡೆಂಟಗೆ ಹೇಳಿ ಮಾಡಿಸಿಟ್ಟಂತೆ ಇದೆ.

ಅಲ್ಲೇ ಸಂಜೆಯ ತನಕ ಕಾದರೂ ಬಿಜಲಿ ಬರಲೇ ಇಲ್ಲ. ಇನ್ನೊಂದು ಹತ್ತು ನಿಮಿಷ ಇರೋಣ ಎಂದರೆ ನಮ್ಮ ರಿತೇಶ ಇಲ್ಲ ಸರ್ ಸಮಯವಾಗುತ್ತೆ ಎಂದು ರಗಳೆ ತೆಗೆದ. ಇಲಾಖೆಯವರು ಫೈನ್ ಹಾಕುತ್ತಾರೆ. ಸುಮ್ಮನೆ ಡ್ರೈವರಿಗೂ, ನ್ಯಾಚುರಲಿಸ್ಟಿಗೂ ನೋಟೀಸು ಕೊಡುತ್ತಾರೆ. ಅವರ ಪರವಾನಗಿ ಕ್ಯಾನ್ಸಲ್ ಆಗುತ್ತೆ ಎಂದು ಅವಸರ ಮಾಡಿದ. ಅವರಿಗೆ ಇಲ್ಲದ ಅರ್ಜೆಂಟ್ ಇವನಿಗೇಕೆಂದು ನಾವು ಬೇಸರಗೊಂಡರೂ ಅವನ ಮಾತಿಗೆ ಆಯಿತೆಂದು ಒಪ್ಪಿ ಹೊರಟು ತಪ್ಪು ಮಾಡಿದೆವು. ನಾವು ಮಾಡಿದ ಈ ಯಡವಟ್ಟು ಶಾಶ್ವತ ಪಶ್ಚಾತ್ತಾಪಕ್ಕೆ ಕಾರಣವಾಯಿತು. ಬದುಕಲ್ಲಿ ಐದು ನಿಮಿಷದ ತಾಳ್ಮೆಗೆ ಇರುವ ಮಹತ್ವ ಸ್ಪಷ್ಟವಾಗಿ ಅರ್ಥವಾದ ದಿನವದು.

ನಮ್ಮ ದುರದೃಷ್ಟ ಎಂದರೆ ನಾವು ಅತ್ತ ಕಡೆ ಹೋದ ನಾಲ್ಕೇ ನಿಮಿಷಕ್ಕೆ ಬಿಜಲಿರಾಣಿ ತನ್ನ ಎಳೆಯ ಕಂದಗಳ ಕರೆದುಕೊಂಡು ಅದೇ ದಾರಿಯಲ್ಲಿ ನಡೆದು ಬಂದಳಂತೆ. ಆ ಚಿತ್ರಗಳನ್ನು ತೆಗೆದ ಪಟಗಾರರು ನಮಗೆ ತೋರಿಸಿದಾಗ ರಿತೇಶನ ಮರ್ಡರ್ ಮಾಡುವಷ್ಟು ಸಿಟ್ಟು ಬಂದಿತ್ತು. ಹಾಳಾದವನೆ ಸುಮ್ಮನೆ ಹರಿಬರಿ ಮಾಡಿ ಜೀವಮಾನದ ಅತ್ಯುತ್ತಮ ಚಿತ್ರ ತೆಗೆಯುವ ಅವಕಾಶ ಹಾಳು ಮಾಡಿದೆಯಲ್ಲೋ? ಎಂದು ರೇಗಿಕೊಂಡೆವು. ಅವನು ಕೇಳಿದರೂ ಕೇಳದಂತೆ ತೆಪ್ಪಗೆ ಕೂತಿದ್ದ. ತಿರುಗಿ ನಮ್ಮೂರು ಸಿಗುವವರೆಗೂ ತಪ್ಪಿದ ಆ ಸುವರ್ಣ ಗಳಿಗೆಯನ್ನು ನೆನಪಿಸಿ ಅವನ ಬಯ್ಯುತ್ತಲೇ ಇದ್ದೆವು.

ಏನು ಮಾಡುವುದು ಕಾಡಿನ ಅನುಭವಗಳು ಎಂದರೆ ಹೀಗೆನೆ. ಸಿಗಬೇಕಾಗಿದ್ದು ಸಿಗುವುದಿಲ್ಲ. ಸಿಗಲಾಗದ್ದು ಸಿಕ್ಕೇ ಬಿಡುತ್ತದೆ. ಬಯಸದ ಅಚ್ಚರಿಗಳು ಸೃಷ್ಟಿಯಾಗುತ್ತವೆ. ಕೆಲವೊಮ್ಮೆ ಬಯಸಿದ್ದು, ಕನಸಿದ್ದು, ನಿರೀಕ್ಷಿಸಿದ್ದು ಎಂದೆಂದೂ ಸಿಗದೆ ನಮ್ಮ ಹುಡುಕಾಟದ ಹಸಿವು ವಿಸ್ತರಿಸುತ್ತದೆ. ಈ ಕಾರಣಕ್ಕೆ ನಮ್ಮ ಫೊಟೋಗ್ರಫಿ ಪಯಣ ಎಂಬ ಜೂಜು ಯಾತ್ರೆ ಎಂದೆಂದಿಗೂ ಮುಗಿಯುವುದಿಲ್ಲ.

●